ORIGINAL RESEARCH PAPER | Arts

# KARNATAKA JAANAPADA NRUTHYA
## ಕನರ್ಾಟಕದ ಜಾನಪದ ನೃತ್ಯ

KEY WORDS:

**Lohit .P**

Lecturer, Department of kannada, Akshara Institute of Management Studies, Akshara Nagara, Channamumbapura, Savalanga road, Shivamogga (D), Pin- 577203, Karnataka, India.

ಜಾನಪದ ಎಂಬುದು ವ್ಯಾಪಕವಾದುದು ಜೊತೆಗೆ ವಿಶ್ವ ಮೌಲಿಕತೆಯನ್ನು ಒಳಗೊಂಡದ್ದಾಗಿದೆ. ಇಂಥಜಾನಪದವನ್ನ ಜಗತ್ತಿನವಿದ್ವಾಂಸರುನಾನಾಬಗೆಯಲ್ಲಿವ್ಯಾಖ್ಯಾನಿಸಿದರು.ಹಲವುಬಗೆಯ ವ್ಯಾಖ್ಯಾನಗಳೇ ಹುಟ್ಟಿಕೊಂಡು ಅದಕ್ಕೂಂದು ವೈಜ್ಞಾನಿಕ ಸ್ವರೂಪವೇ ಬಂದಂತಾಯಿತು. ಪರಂಪರಾಗತ ಸಂಗತಿಗಳ ಒಟ್ಟು ಮೊತ್ತ ಜಾನಪದವೆಂದೂ ಅದು ಎಂದೆಂದಿಗೂ ನಾಶವಾಗದೇ ಇರುವಂಥದ್ದುಅಂದರಅವಿನಾಶಿಎಂತಲೂವಿದ್ವಾಂಸರುಸಾಧಿಸಿದರು.

ಈ ಜಗತ್ತಿನಲ್ಲಿ ಮಾನವನ ಸೃಷ್ಟಿ ಯಾವತ್ತು ನಡೆಯಿತೋ ಅಂದೇ ಜಾನಪದ ಉಗಮನವೂ ಆಯಿತು. ಮಾನವನ ಬೆಳವಣಿಗೆಯೊಂದಿಗೆ ಜಾನಪದವು ಮುಂದುವರೆದು, ಆದಿಮಾನವನ ಜೊತೆಯಲ್ಲಿಯೇ ಆತನ ನಡೆ-ನುಡಿ, ಆಚಾರ-ವಿಚಾರ, ಆಹಾರ-ವಿಹಾರ, ನಂಬಿಕೆ-ನಡವಳಿಕೆಗಳೂ ಕಂಡುಬಂದವು. ಸುಮಾರು 150 ವರ್ಷಗಳ ಹಿಂದೆಯಷ್ಟೇ ವಿದ್ವಾಂಸರು ಇದನ್ನು ಒಂದು ಶಾಸ್ತ್ರ ಎಂದುಪರಿಗಣಿಸಿದರೂ.

ಪರಂಪರಾಗತವಾಗಿ ಬಂದ ಧರ್ಮ, ಜಾತಿ, ಭಾಷೆ, ವೃತ್ತಿ ಇತ್ಯಾದಿ ವಿಷಯಗಳಲ್ಲಿ ಕನಿಷ್ಟ ಒಂದನ್ನಾದರೂ ಅನುಸರಿಸಿಕೊಂಡು ಒಂದು ನಿದರ್ಿಷ್ಟ ಪ್ರದೇಶದಲ್ಲಿ ವಾಸಿಸುವ ಜನರ ಗುಂಪನ್ನು ಜನಪದ ಎನ್ನಬಹುದು. ಈ ಜನಪದರಿಗೆ ಸಂಬಂಧಪಟ್ಟಂತೆ ಇರುವ ಎಲ್ಲಾ ವಸ್ತು ವಿಷಯಗಳನ್ನು ಜಾನಪದ ಎನ್ನಬಹುದು. ಜಾನಪದಕ್ಕೆ ತನ್ನದೇ ಆದ ಕೆಲವೊಂದು ವಿಶಿಷ್ಟ ಲಕ್ಷಣಗಳಿವೆ, ಮೌಖಿಕ ಗುಣ, ಪ್ರಸರಣ ಗುಣಗಳನ್ನು ಹೊಂದಿರುವುದು. ಜೀವಂತ ಪಳೆಯುಳಿಕೆಯಾಗಿರುವುದು, ಸಮೂಹದಿಂದ ಹುಟ್ಟಿಕೊಂಡು ಪರಂಪರಾಗತವಾಗಿ ಮುಂದುವರೆಯುವುದು ಇವು ಜಾನಪದ ಪ್ರಮುಖ ಲಕ್ಷಣಗಳಾಗಿವೆ. ಜಾನಪದ ಕಲೆಗಳ ಬೆಳವಣಿಗೆಯಿಂದಲೇ ಮನುಷ್ಯನ ಸಂಸ್ಕೃತಿ ಇತಿಹಾಸ ನಿಮರ್ಾಣಗೊಂಡಿತು. ಜಾನಪದ ಕಲೆಗಳು ಸಂಸ್ಕೃತಿಯ ಅವಿಭಾಜ್ಯ ಅಂಗ. ಪ್ರದರ್ಶನ ಕಲೆಗಳು ಜನರ ಆಸೆ ಆಕಾಂಕ್ಷೆಗಳನ್ನು ಬಿತ್ತರಿಸುತ್ತವೆ. ಇವು ಕೇವಲ ಮನರಂಜನೆಗಾಗಿ ಅಷ್ಟೇ ಅಲ್ಲ. ಆನಂದ ದುಃಖ ದುಮ್ಮಾನಗಳ ಅಭಿವ್ಯಕ್ತಿಯೂ ಆಗಬಲ್ಲವು. ಕನರ್ಾಟಕದ ಜನಪದ ಕಲೆಗಳು ಇತರ ರಾಜ್ಯಗಳ ಕಲೆಗಳಿಗಿಂತ ಹೆಚ್ಚು ವೈವಿಧ್ಯಪೂರ್ಣವಾಗಿವೆ. ಜನಪದ ಕುಣಿತಗಳು ರಂಗಕಲೆಗಳು ಪ್ರಮುಖವಾಗಿವೆ.

### ಸೋಮನಕುಣಿತ
ಈ ಕುಣಿತವು ಹಾಸನ, ಮಂಡ್ಯ, ಚಿಕ್ಕಮಗಳೂರು ಮತ್ತು ಮೈಸೂರು ಕಡೆಗೆ ನಡೆಯುವ ಮುಖವಾಡದ ಕುಣಿತವಾಗಿದೆ. ಸೋಮನ ಪಾತ್ರಧಾರಿಯು ಕಲಿಗೆ ಗೆಜ್ಜೆ, ಕೈಗಳಿಗೆ ಬೆಳ್ಳಿ ಕಡಗ, ಎದೆಯಮೇಲೆಬೆಳ್ಳಿಮುದ್ರೆಇರುವತಾಳಿಯನ್ನುಧರಿಸಿರುತ್ತಾನೆ.

### ವೀರಭದ್ರನಕುಣಿತ
ಕಚ್ಚೆ ಹಾಕಿದ ಕೆಂಪು ಪಂಚೆ, ಸೊಂಟಕ್ಕೆ ಬಿಗಿದ ದಟ್ಟಿ, ಎದೆಗೆ ತೂಗು ಹಾಕಿದ ರುದ್ರನ ಪ್ರತಿಮೆ, ಕೈಯಲ್ಲಿ ಹೊಳೆಯುವ ಕತ್ತಿ, ತಲೆಗೆ ಕಿರೀಟ, ತಲೆಯ ಹಿಂಭಾಗಕ್ಕೆ ಬೆನ್ನ ಮೇಲೆ ಇಳಿಬಿಟ್ಟ ಬಿಳಿಯ ಚವರಿ, ಹಣೆಗೆ ವಿಭೂತಿ ಸುತ್ತಲೂ ಕೆಂಪಗೆ ಬಣ್ಣ ಬಳಿದ ರೌದ್ರ ಕಣ್ಣುಗಳು ದಪ್ಪನೆಯ ಮೀಸೆ ಇದು ವೀರಭದ್ರನ ವೇಷ. ಶಿವನ ಹೊಗಳಿಕೆಯ ಒಡಪುಗಳನ್ನು ಹೇಳುತ್ತಾ ಕುಣಿಯಲಾಗುತ್ತದೆ. ವೀರಭದ್ರನಕುಣಿತದಹಿನ್ನಲೆಯಿಂದಲೇಪುರವಂತಿಕೆಕುಣಿತಸೃಷ್ಟಿಯಾಗಿದೆ.

### ಜೋಗತಿಕುಣಿತ
ಉತ್ತರ ಕನರ್ಾಟಕದಲ್ಲು ಯಲ್ಲಮ್ಮನ ಭಕ್ತರು ಜೋಗತಿಯಾಗಿರುತ್ತಾರೆ. ಇವರು ಯಲ್ಲಮ್ಮನ ಭಕ್ತ ಪಂಥಕ್ಕೆ ಸೇರಿದವರು. ಬಿಳಿ ಸೇರಿ ಉಟ್ಟುಕೊಂಡು ಕೈಯಲ್ಲಿ ಜಾಗಟೆ ಅಥವಾ ಕರಡಿಯ ಕೂದಲಿನ ಚವರಿ ಹಿಡಿದುಕೊಳ್ಳುತ್ತಾರೆ. ತಲೆಯ ಮೇಲೆ ಕೊಡವನ್ನು ಹೊತ್ತುಕೊಂಡು ಕುಣಿತ ನಡೆಸುತ್ತಾರೆ.

### ಗೊರವರಕುಣಿತ
ಮೈಲಾರ ಲಿಂಗನ ಭಕ್ತರಾದ ಇವರ ಕರಿಯ ಕಂಬಳಿಯ ನಿಲುವಂಗಿಯನ್ನು ಧರಿಸಿರುತ್ತಾರೆ. ಅದರ ಜೊತೆಗೆ ಗಂಟೆ, ಜೋಳಿಗೆ, ಬೆತ್ತ, ಭಂಡಾರ ಪೆಟ್ಟಿಗೆ, ದೋಣಿ, ತ್ರಿಶೂಲ ಇತ್ಯಾದಿಗಳನ್ನು ಹೊಂದಿರುತ್ತಾರೆ.

### ಕಂಸಾಳೆ
ಕಂಸಾಳೆಎಂದರೆಕಂಚಿನತಾಳ,ಕಂಸಾಳೆಹಿಡಿದುವಿವಿಧಭಂಗಿಗಳಲ್ಲಿಪರಸ್ಪರಬಾರಿಸಿಕೊಂಡೂ ಕುಣಿಯುವ ಕುಣಿತವೇ ಕಂಸಾಳೆ ಕುಣಿತ ಎನ್ನುವರು. ಈ ತಂಡದಲ್ಲಿ ಎಂಟು ಜನ ಸದಸ್ಯರಿರಬಹುದು. ಕಲಾವಿದರು ಒಬ್ಬರಿಗೊಬ್ಬರು ತಾಳವನ್ನು ಬೀಸಿಕೊಂಡೂ ತಾಳಕ್ಕೆ ಬಡಿಯುವಂತೆಮಾಡಿಲಯಬದ್ಧವಾಗಿನಾದಹೊರಡಿಸುವನೃತ್ಯವೇಬೀಸುಕಂಸಾಳೆ.

### ಗೊಂದಲಿಗರಮೇಳ
ಸವದತ್ತಿಯ ಯಲ್ಲಮ್ಮ ಮತ್ತು ವಿಜಾಪುರದ ಭವಾನಿಗೆ ನಡೆದುಕೊಳ್ಳುವವರು ಗೊಂದಲಿಗರು. ಯಲ್ಲಮ್ಮನಕಥೆಯನ್ನುಹಾಗೂಇತರದೇವಿಯಕಥೆಗಳನ್ನುಹಾಡಿನಮೂಲಕಬಿತ್ತರಿಸುತ್ತಾರೆ.

### ಚಾಡಿಕೆಮೇಳ
ಉತ್ತರ ಕನರ್ಾಟಕದ ಗುಲ್ಬರ್ಗ, ಧಾರವಾಡ, ಚಿಕ್ಕಮಗಳೂರು, ಚಿತ್ರದುರ್ಗ, ಬೆಳವಾವಿ ಜಿಲ್ಲೆಗಳುಮುಂತಾದಪ್ರದೇಶಗಳಲ್ಲಿಯಲ್ಲವ್ವನಭಕ್ತರುಚಾಡಿಕೆಮೇಳನಡೆಸುತ್ತಾರೆ.

### ಮೊಹರಂಕುಣಿತ
ಹಿಜರಿ ಸಂವತ್ಸರದ ಮೊದಲನೆಯ ತಿಂಗಳ ವೊಹರಂ. ಈ ತಿಂಗಳಲ್ಲಿ ಹಜರತ್ ಇಮಾಮ್ ಹಸನ್ ಹುಸೇನ್ರು ಹುತಾತ್ಮರಾದರು. ಈ ಶೋಕ ಮತ್ತು ತ್ಯಾಗದ ಆಚರಣೆಯನ್ನು ನಡೆಸಲ್ಲಾಗುವುದು. ಮೊಹರಂ ದೇವರನ್ನು ಹೊತ್ತುಕೊಂಡಿರುತ್ತಾರೆ. ಕೆಲವು ಕಡೆ ಹೊಂಡ ಮಾಡಿ ಅದರಲ್ಲಿ ಕಟ್ಟಿಗೆ ಉರಿಸುತ್ತಾರೆ. ಇದನ್ನು ಅಲಾವಿ ಎನ್ನುತ್ತಾರೆ. ಹಿಂದೂಗಳು ಈ ಹಬ್ಬವನ್ನು ಭಕ್ತಿ, ಶ್ರದ್ಧೆಯಿಂದ ಆಚರಿಸುತ್ತಾರೆ.

### ಭೂತಾರಾಧನೆ
ತುಳು ನಾಡಿನ ಒಂದು ಪ್ರಮುಖ ಆರಾಧನಾ ಕಲೆಯಾಗಿದ್ದು ಜನರು ಭೂತಗಳನ್ನು ದೈವಿಕ ಶಕ್ತಿಗಳಿಂದನಂಬಿಆರಾಧಿಸುತ್ತಾರೆ.

### ಡೊಳ್ಳುಕುಣಿತ
ಇದು ಬೀರದೇವರ ಆರಾಧನಾ ಕುಣಿತವಾಗಿದ್ದು ವಿಜಾಪುರ, ಬಳ್ಳಾರಿ, ತುಮಕೂರು, ಬೆಳಗಾವಿ, ರಾಯಚೂರು, ಗುಲ್ಬಾಗರ್ಾ ಜಿಲ್ಲೆಯ ಮುಂತಾದ ಕಡೆ ನಡೆಯುವ ಈ ಕುಣಿತವು ಕುರುಬ ಜಾತಿಯೊಂದಿಗೆ ನೇರ ಸಂಬಂಧ ಹೊಂದಿದೆ. ಕುಣಿಯುತ್ತ ಡೊಳ್ಳು ಬಾರಿಸುವುದು, ಕುಳಿತಲ್ಲೇ ಡೋಳ್ಳುಬಾರಿಸುವುದುಹಾಗೂಕಥಾವಚನದೊಂದಿಗೆಡೊಳ್ಳುಬಾರಿಸುವಕ್ರಮವೂಇದೆ.

### ಲಂಬಾಣಿಕುಣಿತ
ಲಂಬಾಣಿ ಮಹಿಳೆಯರು ವಿವಿಧ ಬಣ್ಣದ ವೇಷ ಭೂಷಣಗಳಿಂದ ಕುಣಿಯುತ್ತಾರೆ. ಕುಸುತಿ ಕೆಲಸದ ಅಲಂಕಾರದ ಜೊತೆಗೆ ನಾಣ್ಯಗಳನ್ನು ಬೆಳ್ಳಿ ಗೆಜ್ಜೆಗಳನ್ನು ಜೋಡಿಸಿರುತ್ತಾರೆ. ಕೈ ಚಲನೆಯೊಂದಿಗೆ ಹೆಜ್ಜೆಗಳನ್ನು ಹಾಕುತ್ತಾ ಚಪ್ಪಾಳೆ ತಟ್ಟುತ್ತಾ ಕುಣಿಯುವಾಗ ಅದಕ್ಕೆ ತಕ್ಕಂತೆ ಇತರ ಕಲಾವಿದರು ಹಾಡುಹೇಳುತ್ತಿರುತ್ತಾರೆ.

### ಬೊಂಬೆಯಾಟ
ಕನರ್ಾಟಕದಲ್ಲಿ ಬೊಂಬೆಯಾಟದ ಕಲ್ಪನೆ ಅತ್ಯಂತ ಪ್ರಾಚೀನವಾದದ್ದು. ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಬೊಂಬೆಯಾಟವಯ್ಯಾ ಈ ಬ್ರಹ್ಮಾಂಡವು ಆ ದಾವನಾಡುವ ಬೊಂಬೆಯಾಟವಯ್ಯಾ ಎಂದಿದ್ದಾರೆ. ಚೀನಾ ಜಪಾನ್ಗಳಲ್ಲಿ ಇದು ಅತಿ ಪುರಾತನ ಕಲೆ. ಗ್ರೀಸ್ನಲ್ಲಿ ಬೊಂಬೆಯಾಟ ಕಲಾ ಶಾಲೆಗಳಿದ್ದವು. ಸೂತ್ರದ ಬೊಂಬೆಯಾಟಕ್ಕೆ ಯಕ್ಷಗಾನವನ್ನು ಸಂಯೋಜಿಸಿ ಮೆರಗನ್ನು ನೀಡಿದ ಕೀತರ್ಿ ದಕ್ಷಿಣ ಕನ್ನಡಕ್ಕೆ ಸಲ್ಲುತ್ತದೆ. ಕನರ್ಾಟಕದ ಉತ್ತರ ಭಾಗದಲ್ಲಿತೊಗಲಿನಿಂದಬೊಂಬೆಗಳನ್ನುತಯಾರಿಸಲಾಗುತ್ತದೆ.

### ಜನಪದಗಾಯನ

ಪ್ರತಿಯೊಂದು ಹಳ್ಳಿಗಳಲ್ಲಿ ಜನಪದ ಗಾಯನ ಸಂಪ್ರದಾಯವಿದೆ. ಮದುವೆ ಮತ್ತು ಇನ್ನಿತರ ಶುಭ ಸಮಾರಂಭಗಳಲ್ಲಿ ಮಾತ್ರವಲ್ಲದೆ ದಿನನಿತ್ಯದ ಕೆಲಸಗಳಲ್ಲಿ ತೊಡಗಿರುವಾಗಲೂ ಹಳ್ಳಿಯವರು ಜನಪದಗೀತೆಗಳನ್ನು ಕಥನಕವನಗಳನ್ನು ಹಾಡುತ್ತಾಕಾಯಕನಡೆಸಿರುತ್ತಾರೆ. ಐತಿಹಾಸಿಕ, ನೀತಿ ಬೋಧಕ ಲೌಕಿಕ ಕಥೆಗಳನ್ನು ಹಾಡುಗಳಾಗಿ ಪರಿವರ್ತಿಸಿ ದೀರ್ಘ ಸ್ವರವೆತ್ತಿ ಹಾಡಿದಾಗ ಅದು ಲಾವಣಿಯಾಗುತ್ತದೆ. ಭಜನೆ ಸಂಪ್ರದಾಯವು ಜಾನಪದಕ್ಕೆ ಸೇರಿದೆ. ಕಿನ್ನರಿ ಜೋಗಿಗಳು ಜನಪದ ಗಾಯಕರು. ಹೆಳವರು ಕೂಡ ವೃತ್ತಿ ಗಾಯಕರಾಗಿದ್ದು ವಂಶಾವಳಿಯನ್ನು ರಚಿಸಿ ಹಾಡುವುದೇ ಅವರ ಉದ್ಯೋಗವಾಗಿದೆ.

### ಯಕ್ಷಗಾನ

ಕರ್ನಾಟಕದಯಕ್ಷಗಾನವನ್ನು ಮೂಡಲಪಾಯಮತ್ತುಪಡುವಲಪಾಯವೆಂಬಎರಡುವಿಭಾಗ ಮಾಡೂತ್ತಾರೆ. ಮೂಡಲಪಾಯದಲ್ಲಿ ದೊಡ್ಡಾಟ ಮತ್ತು ಸಣ್ಣಾಟಗಳೆಂಬ ಎರಡು ವಿಧಗಳಿವೆ. ಕರಾವಳಿ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಿರುವ ಪಡುವಲಪಾಯದಲ್ಲಿ ಬಡಗು ತಿಟ್ಟು ಮತ್ತು ತೆಂದು ತಿಟ್ಟು ಎಂಬ ಪ್ರಕಾರಗಳಿವೆ. ಯಕ್ಷಗಾನವು ಒಂದು ಪೂರ್ಣ ಮಟ್ಟದ ರಂಗಕಲೆ. ಅದರಲ್ಲಿ ವೇಷವಿದೆ, ಹಾಡು ಇದೆ, ಮಾತುಗಾರಿಕೆ ಇದೆ, ಹಿಮ್ಮೇಳವಿದೆ ಮತ್ತು ಕುಣಿತವಿದೆ. ಹೀಗಾಗಿ ಇದನ್ನು ಗಂಡುಕಲೆಎನ್ನುವರು. ಕರಾವಳಿಕರ್ನಾಟಕದಲ್ಲಿಹೆಚ್ಚು ಜನಪ್ರಿಯವಾಗಿದೆ.

**-: ಪರಾಮರ್ಶನ ಗ್ರಂಥಗಳು:-**


- ಎಂ.ಎಸ್. ಸುಂಕಾಪುರ - ಜನಪದ ಧರ್ಮ
- ಅಂಬಳಿಕೆ ಹಿರಿಯಣ್ಣ - ಜಾನಪದ ಪರಿಶೋಧನ
- ಬರಗೂರು ರಾಮಚಂದ್ರಪ್ಪ - ಸಂಸ್ಕೃತಿ ಉಪಸಂಸ್ಕೃತಿ